ಸಾಕ್ಷಿಯನ್ನು ಈ ದಿನ ದಿನಾಂಕ 25.11.2025 ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಗಿದೆ.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

3. ಮಹಜರ್ ಸಮಯದಲ್ಲಿ ಮಾದರಿ ರಕ್ತ, ರಕ್ತದ ಕಲೆಯಿರುವ ಲ್ಯಾಪ್ ಟಾಪ್ ಚಾರ್ಜರ್ ವೈರ್, ರಕ್ತದ ಕಲೆಯ ಕ್ಯಾಪ್ ಇಲ್ಲದ ಬಾಲ್ ಪೆನ್, ಪಾದರಕ್ಷೆಗಳ ಗುರುತು ಇರುವ ಎರಡು ಬಿಳಿ ಬರೆದಿರುವ ಪೇಪರ್ ಹಾಳೆಗಳು, ನೆಲದ ಮೇಲೆ ಬಿದ್ದಿದ್ದ ಕೂದಲು, ರಕ್ತದ ಕಲೆಯಿರುವ ಕಬ್ಬಿಣದ ಚೇರ್ ಇವುಗಳನ್ನು ವಶಕ್ಕೆ ಪಡೆದು ಠಾಣಾ ಮಾಲುಪಟ್ಟಿ ಸಂಖ್ಯೆ 9/2016 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಮೇಲ್ಕಂಡ ವಸ್ತುಗಳನ್ನು ಸೀಲ್ಡ್ ಕವರ್ ನಿಂದ ತೆಗೆದು ತೋರಿಸಿದ್ದು ಅದರಲ್ಲಿ ಮಾದರಿ ರಕ್ತವನ್ನು ಮು.ಮಾ. 23 ಎಂದು, ಪಾದರಕ್ಷೆಗಳ ಗುರುತು ಇರುವ ಎರಡು ಬಿಳಿ ಬರೆದಿರುವ ಪೇಪರ್ ಹಾಳೆಗಳನ್ನು ಮು.ಮಾ. 24 ಎಂದು, ನೆಲದ ಮೇಲೆ ಬಿದ್ದಿದ್ದ ಕೂದಲನ್ನು ಮು.ಮಾ. 25 ಎಂದು ಗುರುತಿಸಲಾಯಿತು. ಸಾಕ್ಷಿ ಮು.ಮಾ. 1 ರಿಂದ 3 ಅನ್ನು ನೋಡಿ ಗುರುತಿಸಿರುತ್ತಾರೆ. ನಂತರ ಸದರಿ ಅಪಾರ್ಟ್ಮೆಂಟ್ ನ ಸಿ.ಸಿ.ಟಿ.ವಿ. ದೃಶ್ಯವಾಳಿಗಳನ್ನು pendrive ಗೆ ಡೌನ್ಲೋಡ್ ಮಾಡಲು ಮತ್ತು ಡಿ.ವಿ.ಆರ್. ಅನ್ನು ಅಮಾನತು ಪಡಿಸಲು ಅಪಾರ್ಟ್ಮೆಂಟ್ ನ ಬೇಸ್ ಮೆಂಟ್ ಗೆ ಭೇಟಿ ನೀಡಿ ಪಂಚನಾಮೆ ಜರುಗಿಸಲು ಪಂಚರಾದ ಚಾಸಾ. 2 ರಿಂದ 5 ರವರನ್ನು ಬರಮಾಡಿಕೊಂಡು ಅದೇ ಸಮಯದಲ್ಲಿ ಹಾಜರಿದ್ದ ಅಪಾರ್ಟ್ಮೆಂಟ್ ನ facility ಮ್ಯಾನೇಜರ್ ಆಗಿದ್ದು ಅವರು ಡಿ.ವಿ.ಆರ್. ಅನ್ನು ತೆಗೆದು ಅದರಲ್ಲಿ ದಿನಾಂಕ 19.01.2016 ರ ಸಿ.ಸಿ.ಟಿ.ವಿ. ದೃಶ್ಯವಾಳಿಗಳನ್ನು ಪರಿಶೀಲನೆ ಮಾಡಿ ಹೊಸ

pendrive ಗೆ ಕಾಫಿ ಮಾಡಿ ಹಾಜರು ಮಾಡಿದ್ದರು. ಸದರಿ pendrive ಅನ್ನು ಬಿಳಿ ಬಟ್ಟೆಗೆ ಹಾಕಿ ವಶಕ್ಕೆ ಪಡೆದಿರುತ್ತೇನೆ. ಪಂಚರ ಸಮಕ್ಷಮ ಡಿ.ವಿ.ಆರ್. ಅನ್ ವಶಕ್ಕೆ ಪಡೆದಿರುತ್ತೇನೆ. ಅಲ್ಲೇ ಹಾಜರಿದ್ದ ಚಾಸಾ. 5 ರವರು ಸೆಕ್ಯೂರಿಟಿ ಸೂಪರ್ವೈಸರ್ ಆಗಿದ್ದು ಅವರು ಒಂದು ಲಾಗ್ ಬುಕ್ ಅನ್ನು ಹಾಜರು ಪಡಿಸಿದ್ದು ಅದನ್ನು ಪರಿಶೀಲಿಸಲಾಗಿ ದಿನಾಂಕ 19.01.2016 ರಂದು ಮಧ್ಯಾಹ್ನ 12.20 ಕ್ಕೆ ಆರೋಪಿ ಸುಕ್ಬೀರ್ ಸಿಂಗ್ ರವರು ಪ್ಲಾಟ್ ನಂ. 507 ಕ್ಕೆ ಹೋಗಿ ಮಧ್ಯಾಹ್ನ 3.30 ಕ್ಕೆ ಹೊರಗೆ ಹೋದ ಬಗ್ಗೆ ಸಹಿ ಕಂಡುಬಂತು. ಲಾಗ್ ಬುಕ್ ಅನ್ನು ಪಂಚರ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಶಾನೆ.ಪಿ. 2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಇ) ಎಂದು ಗುರುತಿಸಲಾಯಿತು. ಲಾಗ್ ಬುಕ್ ಅನ್ನು ಈಗಾಗಲೇ ನಿಶಾನೆ.ಪಿ. 5 ಎಂದು ಗುರುತಿಸಲಾಗಿದೆ. ನಿಶಾನೆ.ಪಿ. 6 Pendrive ಅನ್ನು ಸಾಕ್ಷಿ ಗುರುತಿಸಿರುತ್ತಾರೆ. ಮು.ಮಾ. 5 ಡಿ.ವಿ.ಆರ್. ಅನ್ನು ಸಾಕ್ಷಿ ಗುರುತಿಸಿರುತ್ತಾರೆ.

4. ನಂತರ ಅದೇ ದಿನ ಚಾಸಾ. 2 ರಿಂದ 8 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ. 8 ರವರು ವಿಚಾರಣೆ ಕಾಲಕ್ಕೆ ಮನೆಯ ಬಾಡಿಗೆ ಕರಾರನ್ನು ಹಾಜರು ಪಡಿಸಿದ್ದರು. ನಿಶಾನೆ.ಪಿ. 11 ಅನ್ನು ಸಾಕ್ಷಿ ಗುರುತಿಸಿರುತ್ತಾರೆ. ದಿನಾಂಕ 21.01.2016 ರಂದು ವೈದೇಹಿ ಆಸ್ಪತ್ರೆಗೆ ಶವಗಾರಕ್ಕೆ ಭೇಟಿ ನೀಡಿ ಮೃತ ಕುಸುಮ ರಾಣಿ ರವರ ಶವದ ಮೇಲೆ ಶವ ತನಿಖೆ

ನಡೆಸಲು ಪಂಚರಾದ ಚಾಸಾ. 9 ರಿಂದ 11 ರವರನ್ನು ನೇಮಿಸಿದೆ. ಅವರ ಸಮಕ್ಷಮ ಶವ ಪಂಚನಾಮೆ ಜರುಗಿಸಿದೆ. ನಿಶಾನೆ.ಪಿ. 12 ರಲ್ಲಿ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 12 (ಡಿ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಚಾಸಾ. 12, 13, 2, 5 ಮತ್ತು 6 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಶವ ಪರೀಕ್ಷೆಗಾಗಿ ವೈದ್ಯರಿಗೆ ಶವವನ್ನು ಕಳುಹಿಸಿಕೊಟ್ಟಿರುತ್ತೇನೆ. ನಂತರ ಶವವನ್ನು ಮೃತಳ ಅಣ್ಣನಿಗೆ ನೀಡಿರುತ್ತೇವೆ. ಮೃತಳ ಮೊಬೈಲ್ ಸಂಖ್ಯೆ 7022793330 ಹಾಗೂ ಆರೋಪಿಯ ಮೊಬೈಲ್ ಸಂಖ್ಯೆ 8930918309 ಅನ್ನು ಕರೆಯ ವಿವರಗಳನ್ನು ಪಡೆದು ಪರಿಶೀಲನೆ ಮಾಡಿರುತ್ತೇನೆ. ಅದರಲ್ಲಿ ದಿನಾಂಕ 19.01.2016 ಪರಸ್ಪರ ಕರೆಗಳು ಮಾಡಿರುವುದು ಕಂಡು ಬಂತು. ಸದರಿ ಸಿ.ಡಿ.ಆರ್. ಗಳನ್ನು ನಿಶಾನೆ.ಪಿ. 35 ಮತ್ತು 36 ಎಂದು, ಸಾಕ್ಷಿಯ ಸಹಿಗಳನ್ನು ನಿಶಾನೆ.ಪಿ. 35 (ಎ) ಮತ್ತು 36 (ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿ ರವಿಕುಮಾರ್ ರವರ ಹೇಳಿಕೆ ಪಡೆದುಕೊಂಡೆ.

5. ದಿನಾಂಕ 22.01.2016 ರಂದು ಆರೋಪಿಯ ಪತ್ತೆಗಾಗಿ ನೇಮಿಸಿದ್ದ ಚಾಸಾ. 46 ರವರು ಆರೋಪಿಯನ್ನು ದಿನಾಂಕ 21.01.2016 ರಂದು ಹರಿಯಾಣ ಜಿಲ್ಲೆ ಪಲ್ವಲ್ ಗ್ರಾಮದಲ್ಲಿ ವಶಕ್ಕೆ ಪಡೆದು ಆತನ ಸ್ವ-ಇಚ್ಛಾ ಹೇಳಿಕೆ ಮಾಡಿಕೊಂಡು ಮಹಜರ್ ಮಾಡಿ ಆರೋಪಿಯನ್ನು ಅಲ್ಲಿನ ನ್ಯಾಯಾಲಯಕ್ಕೆ ಹಾಜರು ಪಡಿಸಿ ಟ್ರಾನ್ಸಿಟ್ ವಾರೆಂಟ್ ವರದಿಯೊಂದಿಗೆ ಹಾಜರು ಪಡಿಸಿದರು. ಅದರ ಜೊತೆಗೆ ಅವರು ಹಾಜರು ಪಡಿಸಿದ ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆ

10/2016 ರಲ್ಲಿ ನಮೂದಿಸಿದೆ. ಸದರಿ ಆರೋಪಿಯ ಸ್ವ-ಇಚ್ಛಾ ಹೇಳಿಕೆ ಮಾಡಿಕೊಂಡೆ. ಸ್ವ-ಇಚ್ಛಾ ಹೇಳಿಕೆಯಲ್ಲಿ ಆರೋಪಿತನು ನನ್ನನ್ನು ಕರೆದುಕೊಂಡು ಹೋದರೆ ಕುಸುಮಾ ರಾಣಿಯನ್ನು ಕೊಲೆ ಮಾಡಿದ ಸ್ಥಳ ಮತ್ತು ಆಕೆಯಿ credit card, cheque books, mobile phones, PAN card ತೆಗೆದುಕೊಂಡು ಹೋದ ಸ್ಥಳವನ್ನು ತೋರಿಸಿಸುತ್ತೇನೆ ಹಾಗೂ ಕುಸುಮಾ ರಾಣಿಯ ಐ.ಸಿ.ಐ.ಸಿ.ಐ. debit card ನಿಂದ ಹಣ ಡ್ರಾ ಮಾಡಿದ ಸ್ಥಳ ಹಾಗೂ ಫೋರಂ ವ್ಯಾಲ್ಯು ಮಾಲ್ ನಲ್ಲಿ ಆರೋ ಶೋರೂಂ ನಲ್ಲಿ ಹೊಸ ಪ್ಯಾಂಟ್ ಖರೀದಿಸಿದ ಸ್ಥಳ ಹಾಗೂ ಆತನ ಕೃತ್ಯದ ಸಮಯದಲ್ಲಿ ಧರಿಸಿದ್ದ ಜೀನ್ಸ ಪ್ಯಾಂಟ್ ಅನ್ನು ತೆಗೆದು ಹಾಕಿದ ಸ್ಥಳ ಹಾಗೂ ಶೂಗಳನ್ನು ಖರೀದಿ ಮಾಡಿದ ಸ್ಥಳದ ಹಾಗೂ ಕೃತ್ಯದ ಸಮಯದಲ್ಲಿ ಧರಿಸಿದ್ದ ಶೂ ಗಳನ್ನು ಬಿಟ್ಟು ಹೋಗಿದ ಸ್ಥಳಗಳನ್ನು ತೋರಿಸುವುದಾಗಿ ಹೇಳಿರುತ್ತಾನೆ. ಸದರಿ ಹೇಳಿಕೆಯನ್ನು ಈಗಾಗಲೇ ನಿಶಾನೆ.ಪಿ. 29 ಎಂದು ತಪ್ಪಾಗಿ ಗುರುತಿಸಲಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಪೋಲೀಸ್ ಬಂಧನಕ್ಕೆ ಪಡೆದುಕೊಂಡೆ.

6. ಅದೇ ದಿನ ಚಾಸಾ. 45 ರವರ ಹೇಳಿಕೆ ಮಾಡಿಕೊಂಡೆ. ದಿನಾಂಕ 24.01.2016 ರಂದು ಆರೋಪಿತನ ಸ್ವ-ಇಚ್ಛಾ ಹೇಳಿಕೆಯಲ್ಲಿ ತಿಳಿಸಿರುವಂತೆ ಐ.ಸಿ.ಐ.ಸಿ.ಐ. debit card ನಿಂದ ಹಣ ಡ್ರಾ ಮಾಡಿದ ಸ್ಥಳವನ್ನು ತೋರಿಸಿದ್ದು ಅಲ್ಲಿ ಮಹಜರ್ ಮಾಡಲು ಪಂಚರಾದ ಚಾಸಾ. 33, 34 ರವರನ್ನು ನೇಮಿಸಿಕೊಂಡು ಅವರ ಸಮಕ್ಷಮ ಆರೋಪಿ ಎ.ಟಿ.ಎಂ. ಅನ್ನು ತೋರಿಸಿ ಅಲ್ಲಿ

11 ಸಾವಿರ ರೂ ಡ್ರಾ ಮಾಡಿದ್ದಾಗಿ ತಿಳಿಸಿದ್ದು ಅಲ್ಲಿ ಮಹಜರ್ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಶಾನೆ.ಪಿ. 19 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 19 (ಸಿ) ಎಂದು ಗುರುತಿಸಲಾಯಿತು. ಆರೋಪಿತನ ಸ್ವ-ಇಚ್ಛಾ ಹೇಳಿಕೆಯಲ್ಲಿ ತಿಳಿಸಿರುವಂತೆ ಪ್ಯಾಂಟ್ ಹಾಗು ಶೂ ಖರೀದಿಸಿದ ಬಗ್ಗೆ ಫೋರಂ ವ್ಯಾಲ್ಯು ಮಾಲ್ ನಲ್ಲಿ ಆರೋ ಶೋರೂಂ ಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಮಹಜರ್ ಮಾಡಲು ಪಂಚರಾದ ಚಾಸಾ. 18 ಮತ್ತು 19 ರವರನ್ನು ನೇಮಿಸಿಕೊಂಡು ಅವರ ಸಮಕ್ಷಮ ಆರೋಪಿ ಆರೋ ಶೋ ರೂಂ  ಒಳಗೆ ಹೋಗಿ ಟ್ರಯಲ್ ರೂಂ ನ ಪಕ್ಕದ ಡೆಸ್ಟ್  ಬಿನ್ ಅನ್ನು ಪ್ಯಾಂಟ್ ಅನ್ನು ಹಾಜರು ಪಡಿಸಿದ್ದು ಅದು ಕಪ್ಪು ಬಣ್ಣದ ಜೀನ್ಸ್ ಪ್ಯಾಂಟ್ ಆಗಿದ್ದು ಅದನ್ನು ಪಂಚರ ಸಮಕ್ಷಮ ವಶಕ್ಕೆ  ಪಡೆದಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಶಾನೆ.ಪಿ. 14 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 14 (ಬಿ) ಎಂದು ಗುರುತಿಸಲಾಯಿತು.  ಸದರಿ ಪ್ಯಾಂಟ್ ಅನ್ನು ಈಗಾಗಲೇ ಮು.ಮಾ. 6 ಎಂದು ಗುರುತಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ.

7. ಆರೋಪಿತನು ಸ್ವ-ಇಚ್ಛಾ ಹೇಳಿಕೆಯಲ್ಲಿ ತಿಳಿಸಿರುವಂತೆ ರಕ್ತದ ಕಲೆಯಾಗಿರುವ ತೆಗೆದು ಹಾಕಿ ಹೊಸ ಶೂ ಖರೀದಿಸಿದ ಬಗ್ಗೆ ಫೋರಂ ವ್ಯಾಲ್ಯು ಮಾಲ್ ನಲ್ಲಿ ಪೂಮಾ ಶೋ ರೂಂ ಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಮಹಜರ್ ಮಾಡಲು ಪಂಚರಾದ ಚಾಸಾ. 21 ಮತ್ತು 22 ರವರನ್ನು ನೇಮಿಸಿಕೊಂಡು ಅವರ ಸಮಕ್ಷಮ ಆರೋಪಿ ಪೂಮಾ ಶೋ ರೂಂ ಗೆ ಸ್ವತಃ

ಒಳಗೆ ಹೋಗಿ ಕೌಂಟರ್ ನಲ್ಲಿ ಇದ್ದ ಮ್ಯಾನೇಜರ್ ಅನ್ನು ತಾನು ದಿನಾಂಕ 19.01.2016 ರಂದು ಹೊಸ ಶೂ ಖರೀದಿಸಿ ಹಾಗೂ ಹಳೆಯ ಶೂ ಅನ್ನು ಬಿಟ್ಟು ಹೋಗಿದ್ದಾಗಿ ಅದನ್ನು ಹಾಜರು ಪಡಿಸಲು ತಿಳಿಸಿದ್ದು ಸದರಿಯವರು ಆರೋಪಿ ಹೇಳಿದಂತೆ ಒಪ್ಪಿಕೊಂಡು ಶೋ ರೂಂ ನಿಂದ ಒಂದು ಜೊತೆ ಹಳೆಯ ಶೂ ಅನ್ನು ಹಾಜರು ಪಡಿಸಿದ್ದು ಅದನ್ನು ಪರೀಶಿಲನೆ ಮಾಡಿ ರಿಬೋಕ್ ಕ್ಲಾಸಿಕ್ ಎಂಬ ಹೆಸರು ಇದ್ದು ರಕ್ತದ ಕಲೆಗಳು ಇದ್ದು ಅವುಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಶಾನೆ.ಪಿ. 16 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 16 (ಸಿ) ಎಂದು ಗುರುತಿಸಲಾಯಿತು. ಸದರಿ ಒಂದು ಜೊತೆ ಶೂ ಅನ್ನು ಈಗಾಗಲೇ ಮು.ಮಾ. 8 ಎಂದು ಗುರುತಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಚಾಸಾ. 16, 17, 20 ರವರ ಹೇಳಿಕೆಗಳನ್ನು ಪಡೆದುಕೊಂಡೆ. ಚಾಸಾ. 20 ರವರು ಆರೋಪಿ ರವರು ಆರೋಪಿ ಶೂ ಮತ್ತು ಸಾಕ್ಸ್ ಖರೀದಿಸಿದ ಬಗ್ಗೆ ಬಿಲ್ ಗಳ ಪ್ರತಿಗಳನ್ನು ಹಾಜರು ಪಡಿಸಿದರು.

8. ದಿನಾಂಕ 25.01.2016 ರಂದು ಆರೋಪಿತನು ದಿನಾಂಕ 19.01.2016 ರಂದು ದೆಹಲಿಯಿಂದ ಬೆಂಗಳೂರಿಗೆ ಬಂದ ಬಗ್ಗೆ ಏರ್ ಏಷಿಯ ಏರ್ ಲೈನ್ಸ್ ನ ಐಟಿನರಿ ದಾಖಲೆಗಳನ್ನು ಹಾಜರು ಪಡಿಸಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆ. ಸದರಿ ದಾಖಲೆಗಳನ್ನು ನಿಶಾನೆ.ಪಿ. 37 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 37 (ಎ) ಎಂದು

ಗುರುತಿಸಲಾಯಿತು. ದಿನಾಂಕ 26.01.2016 ರಂದು ಆರೋಪಿಯ ವಿಚಾರಣೆ ಮಾಡಿ ಮುಂದುವರಿದ ಹೇಳಿಕೆ ದಾಖಲು ಮಾಡಿದೆ. ಆರೋಪಿತನು ಸ್ವ-ಇಚ್ಛಾ ಹೇಳಿಕೆಯಲ್ಲಿ ತಿಳಿಸಿರುವಂತೆ ಕೃತ್ಯದ ಸಮಯದಲ್ಲಿ ಧರಿಸಿದ್ದ ರಕ್ತದ ಕಲೆಯಾಗಿರುವ ಪ್ಯಾಂಟ್ ಅನ್ನು ಅಪಾರ್ಟ್‌ಮೆಂಟ್ ನ ಕಿಟಕಿಯಿಂದ ಹೊರಗೆ ಹಾಕಿದ್ದು ಅದನ್ನು ಹಾಜರು ಪಡಿಸುವುದಾಗಿ ತಿಳಿಸಿದ್ದು ಅದರ ಮೇರೆಗೆ ಸಿಬ್ಬಂಧಿಗಳ ಬೆಂಗಾವಲಿನೊಂದಿಗೆ ವಿಜಯಲಕ್ಷ್ಮೀ ಕಾಲೋನಿ ಮಹಾವೀರ್ ಸಿಂಗ್ ಅಪಾರ್ಟಮೆಂಟ್ ನ ಮನೆಯ ಸಂಖ್ಯೆ 507 ಗೆ ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿದ್ದು ಅಲ್ಲಿ ಮಹಜರ್ ಮಾಡಲು ಪಂಚರಾದ ಚಾಸಾ. 23 ಮತ್ತು 24 ರವರನ್ನು ನೇಮಿಸಿಕೊಂಡು ಅವರ ಸಮಕ್ಷಮ ಆರೋಪಿ ಹಾಲ್ ನ ಕಿಟಕಿಯ ಬಳಿ ನೀರು ಹೋಗುವ ಪೈಪ್ ಅಳವಡಿಸಿರುವ ಸ್ಥಳದಲ್ಲಿ ಒಂದು ಪ್ಯಾಂಟ್ ಅನ್ನು ತೋರಿಸಿ ಹಾಜರು ಪಡಿಸಿ ಅದನ್ನು ಪರಿಶೀಲನೆ ಮಾಡಿದ್ದು ಅದನ್ನು ತಿಳಿ ನೀಲಿ ಬಣ್ಣದ ರಕ್ತದ ಕಲೆಗಳಿರುವ ಪ್ಯಾಂಟ್ ಆಗಿದ್ದು ಅದರ ಮೇಲೆ armony jeans ಎಂದು ಇದ್ದು ಅದನ್ನು ವಶಕ್ಕೆ ಪಡೆದಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಶಾನೆ.ಪಿ. 15 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 15 (ಸಿ) ಎಂದು ಗುರುತಿಸಲಾಯಿತು. ಸದರಿ ಪ್ಯಾಂಟ್ ಅನ್ನು ಈಗಾಗಲೇ ಮು.ಮಾ. 7 ಎಂದು ಗುರುತಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಪಿರ್ಯಾದಿ ಯನ್ನು ಕರೆಸಿ ಆ ಜೆಲಸ್ ಪ್ಯಾಂಟ್ ಅನ್ನು ಗುರುತಿಸುವಂತೆ ಕೇಳಿ ಮಹಜರ್ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಶಾನೆ.ಪಿ. 22 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 22 (ಬಿ) ಎಂದು ಗುರುತಿಸಲಾಯಿತು. ನಂತರ ಚಾಸಾ.

1 ರಿಂದ 6 ರವರ ಮುಂದುವರಿದ ಹೇಳಿಕೆ ದಾಖಲು ಮಾಡಿರುತ್ತೇನೆ.

9. ದಿನಾಂಕ 27.01.2016 ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದೆ. ದಿನಾಂಕ 29.01.2016 ರಂದು ಆರೋಪಿ ದಿನಾಂಕ 19.01.2016 ರಂದು ಬೆಂಗಳೂರಿನಿಂದ ದೆಹಲಿಗೆ ಜೆಟ್ ಏರ್ ವೇಸ್ ನಲ್ಲಿ ಪ್ರಯಾಣ ಮಾಡಿದ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡೆ. ಸದರಿ ದಾಖಲೆಗಳನ್ನು ನಿಶಾನೆ.ಪಿ. 38 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 38 (ಎ) ಎಂದು ಗುರುತಿಸಲಾಯಿತು. ಅದೇ ದಿನ ಮೃತಳ ಐ.ಐ.ಸಿ.ಐ. ಬ್ಯಾಂಕ್ ಖಾತಾ ಸಂಖ್ಯೆ 098601524887 ನ ಸ್ಟೇಟ್ ಮೆಂಟ್ ಅನ್ನು ಪಡೆದು ಪರಿಶೀಲನೆ ಮಾಡಿದ್ದು ದಿನಾಂಕ 19.01.2016 ರಂದು ಎ.ಟಿ.ಎಂ. 10 ಸಾವಿರ ಹಾಗೂ 1 ಸಾವಿರ ಡ್ರಾ ಮಾಡಿದ ಬಗ್ಗೆ ಮಾಹಿತಿ ಕಂಡು ಬಂತು. ದಿನಾಂಕ 01.02.2016 ರಂದು ಬೆಂಗಳೂರಿನಿಂದ ದೆಹಲಿಗೆ ಪ್ರಯಾಣ ಮಾಡಲು ಕ್ಲಿಯರ್ ಟ್ರಿಪ್ ಮೂಲಕ ಜೆಟ್ ಏರ್ ವೇಸ್ ಟಿಕೆಟ್ ಬುಕ್ ಮಾಡಿದ ಬಗ್ಗೆ ದಾಖಲಾತಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆ. ದಿನಾಂಕ 02.02.2016 ರಂದು ಕೆಂಪೇಗೌಡ ಏರ್ ಪೋರ್ಟ್ ನ ವಿ.ಸಿ.ಐ.ಸಿ.ಟಿ. ಅಧಿಕಾರಿಯನ್ನು ಆರೋಪಿ ದೆಹಲಿಯಿಂದ ಬೆಂಗಳೂರು ಮತ್ತು ಬೆಂಗಳೂರಿನಿಂದ ದೆಹಲಿಗೆ ಬಂದು ಹೋದ ಬಗ್ಗೆ ಸಿ.ಸಿ.ಟಿ.ವಿ. ದೃಶ್ಯಾವಳಿಗಳನ್ನು ಪಡೆದುಕೊಂಡೆ. ಆ ಬಗ್ಗೆ ಪತ್ರವನ್ನು ನೀಡಿದ್ದು ಅದನ್ನು ಸಾಕ್ಷಿ ಗುರುತಿಸಿದ್ದು ಸದರಿ ಪತ್ರವನ್ನು ನಿಶಾನೆ.ಪಿ. 39 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು

ನಿಶಾನೆ.ಪಿ. 39 (ಎ) ಎಂದು ಗುರುತಿಸಲಾಯಿತು. ಸದರಿ ಸಿ.ಡಿ.ಯನ್ನು ಮಾಲುಪಟ್ಟಿ ಸಂಖ್ಯೆ 16/ಎ ಎಂದು ನಮೂದಿಸಿರುತ್ತೇನೆ. ದಿನಾಂಕ 02.08.2016 ರಂದು ವೈದೇಹಿ ಆಸ್ಪತ್ರೆಗೆ ವೈದ್ಯರಿಂದ ಮೃತಳ ಪಿ.ಎಂ. ವರದಿ ಪಡೆದುಕೊಂಡು ಹಾಗೂ ಮೃತಳ ಮೈ ಮೇಲೆ ಇದ್ದ ವಸ್ತುಗಳನ್ನು ಪಡೆದುಕೊಂಡು ಮಾಲುಪಟ್ಟಿ ಸಂಖ್ಯೆ 17/16 ಕ್ಕೆ ನಮೂದಿಸಿರುತ್ತೇನೆ. ಸಾಕ್ಷಿ ಪಿ.ಎಂ. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ.ಪಿ. 20 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 20 (ಬಿ) ಎಂದು ಗುರುತಿಸಲಾಯಿತು. ದಿನಾಂಕ 11.02.2016 ರಂದು ಐ.ಸಿ.ಐ.ಸಿ.ಐ. ಬ್ಯಾಂಕ್ ಮ್ಯಾನೇಜರ್ ರವರಿಂದ ಆರೋಪಿ ಹಣ ಡ್ರಾ ಮಾಡಿದ ಬಗ್ಗೆ ಸಿ.ಸಿ.ಟಿ.ವಿ. ದೃಶ್ಯಾವಳಿಗಳನ್ನು ಪಡೆದುಕೊಂಡು ಅದನ್ನು ಮಾಲುಪಟ್ಟಿ ಸಂಖ್ಯೆ 17/ಎ/16 ರಲ್ಲಿ ನಮೂದಿಸಿರುತ್ತೇನೆ.

10. ದಿನಾಂಕ 29.02.2016 ರಂದು ಚಾಸಾ. 42 ರವರ ಮೂಲಕ ಅಮಾನತು ಪಡಿಸಿಕೊಂಡ ವಸ್ತುಗಳನ್ನು ಎಫ್.ಎಸ್.ಎಲ್. ಗೆ ಕಳುಹಿಸಿ ಸ್ವೀಕೃತಿ ಪಡೆದುಕೊಂಡೆ. ದಿನಾಂಕ 02.03.2016 ರಂದು ಆರೋಪಿತನು ಮೃತಳ ಮೊಬೈಲ್ ನಿಂದ ಐ.ಸಿ.ಐ.ಸಿ.ಐ. ಕಸ್ಟಮರ್ ಕೇರ್ ಗೆ ಕರೆ ಮಾಡಿ ಮೃತಳ ಬ್ಯಾಂಕ್ ಖಾತೆಯ ಹೊಸ ಎ.ಟಿ.ಎಂ. ಪಡೆದ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡೆ. ದಿನಾಂಕ 03.03.2016 ರಂದು AEE PWD ರವರಿಂದ ಘಟನ ಸ್ಥಳದ ನಕ್ಷೆ ಪಡೆದುಕೊಂಡು. ಅದನ್ನು ಈಗಾಗಲೇ ನಿಶಾನೆ.ಪಿ. 26 ಎಂದು ಗುರುತಿಸಿದ್ದು

ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 26 (ಬಿ) ಎಂದು ಗುರುತಿಸಲಾಯಿತು. ಆರೋಪಿತನು ಮೃತಳ ಕೋಟಕ್ ಮಹೀಂದ್ರ ಬ್ಯಾಂಕ್ ನಿಂದ ಕ್ಲೀಯರ್ ಟ್ರಿಪ್ ಮೂಲಕ ವಿಮಾನ ಬುಕ್ ಮಾಡಿದ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡೆ. ಸದರಿ ದಾಖಲೆಗಳನ್ನು ನಿಶಾನೆ.ಪಿ. 40 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 40 (ಎ) ಎಂದು ಗುರುತಿಸಲಾಯಿತು.

11. ದಿನಾಂಕ 05.04.2016 ರಂದು ಚಾಸಾ. 31 ರವರ ಗುರ್ಗಾವ್ ನ ಕೋಟಕ್ ಮಹೀಂದ್ರ ಬ್ಯಾಂಕ್ ನಿಂದ ಆರೋಪಿ ಹಾಜರು ಪಡಿಸಿದ ಚೆಕ್ ಲೀಫ್ 000044 ಹಾಗೂ ಆರೋಪಿಯ ಸಹಿ, ಹಾಗಾ ಸಿ.ಸಿ.ಟಿ.ವಿ. ದೃಶ್ಯಾವಳಿಗಳನ್ನು ವರದಿಯೊಂದಿಗೆ ನೀಡಿದ್ದು ಅದನ್ನು ಪಡೆದುಕೊಂಡೆ. ಸದರಿ ಚೆಕ್ ಅನ್ನು ನಿಶಾನೆ.ಪಿ. 41 ಎಂದು ಎಂದು ಗುರುತಿಸಲಾಯಿತು. ದಿನಾಂಕ 07.04.2016 ರಂದು ಚಾಸಾ. 42 ರವರ ಮೂಲಕ ಪ್ರಕರಣದಲ್ಲಿ ವಶಕ್ಕೆ ಪಡೆದ ವಸ್ತುಗಳನ್ನು ಡಿ.ಎನ್.ಎ ಗೆ ಎಫ್.ಎಸ್.ಎಲ್ ಗೆ ಕಳುಹಿಸಿಕೊಟ್ಟು ಅದೇ ದಿನ ಮೊದಲು ಕಳುಹಿಸಿದ ಎಫ್.ಎಸ್.ಎಲ್. ವರದಿ ಪಡೆದುಕೊಂಡು. ಸದರಿ ಎಫ್.ಎಸ್.ಎಲ್. ವರದಿಯನ್ನು ನಿಶಾನೆ.ಪಿ. 42 ಎಂದು ಸಾಕ್ಷಿಯನ್ನು ಸಹಿಯನ್ನು ನಿಶಾನೆ.ಪಿ. 42 (ಎ) ಎಂದು ಗುರುತಿಸಲಾಯಿತು. ದಿನಾಂಕ 16.04.2016 ರಂದು ಪ್ರಕರಣದಲ್ಲಿ ವಶಕ್ಕೆ ಪಡೆದ ವಸ್ತುಗಳನ್ನು ಆರ್. ಎಫ್.ಎಸ್.ಎಲ್ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 17.04.2016 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಎಫ್.ಎಸ್.ಎಲ್ ಗೆ ವರದಿ ಬಾಕಿಯಿಟ್ಟು ಅಂತಿಮ ವರದಿ ಸಲ್ಲಿಸಿರುತ್ತೇನೆ. ದಿನಾಂಕ 10.06.2016 ರಂದು ಆರ್.

ಎಫ್.ಎಸ್.ಎಲ್, ಮೈಸೂರಿನಿಂದ ವರದಿ ಪಡೆದುಕೊಂಡೆ. ಆರ್. ಎಫ್.ಎಸ್.ಎಲ್ ಮೈಸೂರಿನ ವರದಿಯನ್ನು ನಿಶಾನೆ.ಪಿ. 43 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 43 (ಎ) ಎಂದು ಗುರುತಿಸಲಾಯಿತು. ದಿನಾಂಕ 28.06.2016 ರಂದು ಚಾಸಾ. 41 ರವರ ಮೂಲಕ ಗಾಜಿಯಬಾದ್ ನ ಕೋಟಕ್ ಮಹೀಂದ್ರ ಬ್ಯಾಂಕ್ ನಿಂದ ಮೃತಳಿಗೆ ಸಂಬಂಧಪಟ್ಟ ಹೆಸರು, ಭಾವಚಿತ್ರ ಸಹಿ ಇರುವ Resident identification form ಅನ್ನು ಪಡೆದು ಅದನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 78/16 ರಲ್ಲಿ ಅಳವಡಿಸಿಕೊಂಡೆ. Resident identification form ಅನ್ನು ನಿಶಾನೆ.ಪಿ. 44 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 44 (ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

(ಶ್ರೀಮತಿ ಬಿ.ಎಸ್.ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು